## ಪದಬಂಧ



ಎಡದಿಂದ ಬಲಕ್ಕೆ:

1. ಚಿಂತೆಗಳನ್ನು ಕಳೆಯಲು ಬಯಸಿದ್ದನ್ನೆಲ್ಲ ಕೊಡುವ ದಿವ್ಯರತ್ನ 4
3. ಪರೋಟದ ಹಿಟ್ಟು ಕಲಸಲು ಬಳಸಬಹುದಾದ ಹರಿವಾಣ 3
4. ತಿಂಗಳ ಕತೆಯಲ್ಲ ಇದು, ವ್ಯಾಕರಣದ ವಿಷಯ 3
6. ಹಾವಾಡಿಗನಲ್ಲ ಇವನು. ಹುಲ್ಲು, ಹಾಲು, ಮೊಸರು ಮಾರುವ ವ್ಯಕ್ತಿ 4
7. ದೇಹದ ತುಂಬೆಲ್ಲ ಹರಡಿಗೊಂಡಿರುವ ರಕ್ತನಾಳ 3
9. ಭುಜ ಬಲ ಹೊಂದಿರುವ ಕ್ಷತ್ರಿಯ ವೀರ 3
11. ಸರಕಾರಿ ಕಚೇರಿಗಳಲ್ಲಿ ಮೇಜಿನಿಂದ ಮೇಜಿಗೆ ಅಲೆದಾಡುವ ಬಡಪಾಯಿ 3
13. ಲೀಲಾಜಾಲವಾಗಿ ನಡೆದ ಹರಾಜು 3
15. ಎಲ್ಲದಕ್ಕೂ ತಡ ಮಾಡುವ ನಿಷ್ಪ್ರಯೋಜಕ ವ್ಯಕ್ತಿ 4
17. ಒಳಗಣ್ಣಿನಿಂದಲೇ ಜಗತ್ತನ್ನು ನೋಡುವ ಶಕ್ತಿಯುಳ್ಳವನು 3
18. ನಿಮಗೆ ಯಾವುದೇ ಸಂದೇಹ ಬೇಡ. ನಿರಾಳರಾಗಿರಿ 3
19. ಕಲಾ ಸರಸ್ವತಿಯ ದಯೆ ಪಡೆದವಳು(ತಿರುಗಿದೆ) 4

ಮೇಲಿನಿಂದ ಕೆಳಕ್ಕೆ:

1. ಸಮಾಜ ಆರೋಗ್ಯಕರವಾಗಿರಲು ಸದಾ ಆಲೋಚಿಸುವವನು 3
2. ಗತ್ಯಂತರವಿಲ್ಲದೇ ಅನುಭವಿಸಲೇ ಬೇಕಾದ ತೊಂದರೆ(ತಿರುಗಿದೆ) 3
3. ಇದಕ್ಕೆ ಮಿಗಿಲಾದುದು ಇನ್ನೊಂದಿಲ್ಲ. ಅತ್ಯುನ್ನತವಾದುದು 3
5. ಸಲಗವಾಗಲಿ ಯಾವುದೇ ಪ್ರಾಣಿಗಳಾಗಲಿ ಮಕ್ಕಳು ಮರಿಗಳನ್ನು ಕಾಪಾಡುವುದು 3
7. ವಾತವೋ ಪಿತ್ತವೋ ಬಿಡದೇ ಕಾಡುವ ಸೆಳವು ರೋಗ 4
8. ಇದು ಎಂದೆಂದಿಗೂ ಬದಲಾಗದ ನಿಶ್ಚಲ ರೂಪ 4
9. ಸಿನಿಮಾ ಮೂಲಕ ಸದ್ದು ಮಾಡಿದ ಗೊಮ್ಮಟ 4
10. ಏನೋ ಜಾಸ್ತಿ ಕಾಯಿಲೆ, ಜೊತೆಗೆ ಬಹಳ ಯಾತನೆ 4
12. ಕಷ್ಟ ಸುಖಗಳು ಏನೇ ಇರಲಿ ಸಾಗಲೇ ಬೇಕು ಜೀವನ 3
14. ಆಲಿಕೆ ನೆನಪಿಸಿಕೊಳ್ಳಿ. ಜೊತೆಗೆ ಇವನು ಬಹಳ ಜಾಣ 3
15. ರಂಗದ ಮೇಲೆ ಬಂದು ಹೋಗುವ ಪರದೆ 3
16. ಪ್ರತಿಯೊಂದರಲ್ಲೂ ಒಂದೊಂದು ತಕರಾರು ತೆಗೆವ ವ್ಯಕ್ತಿ 3

### 29–04–21 ಉತ್ತರಗಳು

ಎಡದಿಂದ ಬಲಕ್ಕೆ:

1. ಸಡಗರ 3. ನಿಧನ 4. ವಿರಹ 6. ವಾದಭೇದ 7. ಪರಿತಾಪ 9.ರತಮಜ 12.ಗಡಿನರು 15. ಕಣ್ಣಪೊರೆ 17. ನೀರಬಣ್ಣ 18. ಮಷ್ಕಿರಿ 19. ಪೊಗರು 20. ಕರಕರೆ

ಮೇಲಿನಿಂದ ಕೆಳಕ್ಕೆ:

1. ಪದನಿಸ 2. ರವಿವಾರ 3. ನಗಾರಿ 5. ಹನುಮ 7. ಪನ್ನಗ 8. ತಾಡನ 10. ತಬ್ಬಲಿ 11. ಜವಳಿ 13. ಮಹಡಿ 14. ಕರಿನೀರು 15. ಕಣ್ಣಪೊರೆ 16. ತಿಮಿರು

# ಇರುವೆ ಇರುವೆ... ಕೆಂಪಿರುವೆ!

ಮಲೆನಾಡಿನಲ್ಲಿ ಅಡಿಕೆ, ತೆಂಗು, ಮಾವು ಪೇರಳೆ ಮರಗಳಲ್ಲಿ ಕೆಂಪಿರುವೆ ಸಾಮಾನ್ಯ. ಇದನ್ನು ಕೆಂಜಿಗ, ಚಿಗ್ಲಿ ಅಥವಾ ಚಿಗಳಿ ಎಂದೂ ಕರೆಯುವರು. ಇಕೊಫಿಲ್ಲ ಸ್ಮಗಾರ್ಡಿನ ಎಂದು ವೈಜ್ಞಾನಿಕವಾಗಿ ಕರೆಸಿಕೊಳ್ಳುವ ಇದು ಸೊಗಸಾದ ಗೂಡು ಕಟ್ಟುತ್ತವೆ. ಗೂಡು ಕಟ್ಟಲು ಎಲೆಗಳನ್ನು ಬಳಸುತ್ತದೆ. ಕಚ್ಚಿದರೆ ಮೈಯೆಲ್ಲ ಉರಿ ಉರಿ ಆಗುವುದರಿಂದ ದಕ್ಷಿಣ ಕನ್ನಡದಲ್ಲಿ ಇದನ್ನು 'ಉರಿ' ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಉತ್ತರ ಕನ್ನಡದ ಸಿದ್ದಿ ಜನಾಂಗದವರು ಚಿಗ್ಲಿಯಲ್ಲಿ ಚಟ್ನಿ ಮಾಡಿ ಸವಿಯುತ್ತಾರೆ. ಅಲ್ಲದೆ ಇದು ಉತ್ತಮ ಔಷಧಿ ಕೂಡ ಹೌದು. ಇರುವೆಗಳ ಬಾಯಿಯಲ್ಲಿ ಇರುವ ಫಾರ್ಮಿಕ್ ಆಸಿಡ್ ರಾಸಾಯನಿಕವನ್ನು ಸಂಧಿವಾತ, ಕೀಲುನೋವು ನಿವಾರಣೆಗೆ ಬಳಸಲಾಗುತ್ತದೆ. ಇದು ರೋಗ ನಿರೋಧಕ ಶಕ್ತಿಯನ್ನೂ ಹೆಚ್ಚಿಸುತ್ತದೆ ಎನ್ನುತ್ತಾರೆ ತಜ್ಞರು. ಇನ್ನೂ ಹಲವು ರೋಗಗಳನ್ನು ನಿಯಂತ್ರಿಸುವ ಸಾಮರ್ಥ್ಯ ಕೆಂಪಿರುವೆಗಳಲ್ಲಿದೆ ಎಂದೂ ನಂಬಲಾಗಿದೆ.

ಕೊರೊನಾ ಹೆಮ್ಮಾರಿಯ ಸಂಕಷ್ಟ ಕಾಲದಲ್ಲಿ ಕೆಂಪಿರುವೆ ಚಟ್ನಿ ಸೇವನೆ ಪ್ರಯೋಜನಕಾರಿಯಾಗಿದ್ದು, ಇದು ನ್ಯುಮೋನಿಯಾ, ಕಫ, ಕೆಮ್ಮನ್ನು ದೂರ ಮಾಡುತ್ತದೆ ಎಂಬುದು ಅಧ್ಯಯನದಿಂದ ಸಾಬೀತಾಗಿದೆ.



### ರುಚಿಕರ ಚಟ್ನಿ...

ಮಲೆನಾಡು, ಕರಾವಳಿ ಭಾಗಗಳಲ್ಲಿ ಚಿಗ್ಲಿ ಚಟ್ನಿ ಬಹಳ ಜನಪ್ರಿಯ. ಚಳಿಗಾಲದಲ್ಲಿ ಈ ಚಟ್ನಿ ಸೇವನೆ ಅತ್ಯಂತ ರುಚಿಕರ ಎನ್ನುವುದು ಸ್ಥಳೀಯರ ಅಭಿಪ್ರಾಯ. ಇದು ಹೆಚ್ಚಿನ ಪ್ರೊಟೀನ್‌ಗಳಿಂದಲೂ ಕೂಡಿರುತ್ತದೆ ಎನ್ನುತ್ತಾರೆ ಆಹಾರ ತಜ್ಞರು.

ಕೆಂಪಿರುವೆಗಳಿಗೆ ಕಿವಿಗಳಿಲ್ಲ. ಆದರೆ ಅವು ಕಿವುಡರಲ್ಲ. ಶಬ್ದವನ್ನು ಗ್ರಹಿಸಲು ಬೇರೆ ಮಾರ್ಗ ಉಪಯೋಗಿಸುತ್ತವೆ. ತಾವೇ ಗೂಡು ಕಟ್ಟುತ್ತವೆ. ಸಂಸಾರ ಹೂಡುತ್ತವೆ. ಇರುವೆಗಳಲ್ಲಿ ಸುಮಾರು 12 ಸಾವಿರ ಪ್ರಭೇಧಗಳಿವೆ, ಇವುಗಳಲ್ಲಿ ಸುಂದರವಾದ ಗೂಡು ಕಟ್ಟುವ ಸಾಮರ್ಥ್ಯ ಇರುವುದು ಕೆಂಪಿರುವೆಗಳಿಗೇ ಎಂಬುದು ಗಮನಾರ್ಹ..

ಶಿಸ್ತಿಗೆ ಹೆಸರಾಗಿರುವ ಕಪ್ಪು ಇರುವೆಗಳ ಪ್ರಭೇಧವೂ ಬಹು ಜನಪ್ರಿಯ. ಸಾಲಾಗಿ ಶಿಸ್ತಿನಿಂದ ಸಾಗುವ ಇರುವೆಗಳ ಸಾಲು ನೋಡುವುದೇ ಚಂದ.

■ ಯು.ಎ.